ರಾಜ್ಯದಲ್ಲಿ ದಲಿತರ ಮೇಲೆ ನಡೆದ ಹಲ್ಲೆಗಳು

೪೧೪. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).— ಪೂಜ್ಯ ಮುಖ್ಯಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧-೩-೧೯೬೬ ರಿಂದ ೧೩-೨-೧೯೬೯ರವರೆಗೆ ರಾಜ್ಯದಲ್ಲಿ ದಲಿತರ ಮೇಲೆ ನಡೆದ ಹಲ್ಲೆಗಳಲ್ಲಿ ಎಷ್ಟು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ ? (ವರ್ಷವಾರು ಹಾಗೂ ಜಿಲ್ಲಾವಾರು ವಿವರಗಳನ್ನೊದಗಿಸುವುದು).

ಆ) ಈ ಪ್ರಕರಣಗಳಲ್ಲಿ ತನಿಖೆಗೆ ಒಳಪಡಿಸಲಾದ ಪ್ರಕರಣಗಳ ವಿವರಗಳೇನು ?

ಇ) ದಲಿತರ ಮೇಲೆ ಹಲ್ಲೆಗಳು ಕಡಿವೆಯಾಗಲು ಸರ್ಕಾರ ಯೋಜಿಸಿರುವ ಶಾಶ್ವತ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯಮಂತ್ರಿಗಳು).—

ಅ) ವರ್ಷವಾರು ಹಾಗೂ ಜಿಲ್ಲಾವಾರು ವಿವರಗಳನ್ನೊಳಗೊಂಡ ತಃಖ್ತೆಯನ್ನು ಲಗತ್ತಿಸಲಾಗಿದೆ. (ಅನುಬಂಧ-೧)

ಆ) ಈ ಎಲ್ಲಾ ದೌರ್ಜನ್ಯದ ಪ್ರಕರಣಗಳಿಗೆ ಸಂಬಂಧಿಸಿದಂತಹ ಮೊಕದ್ದಮೆಗಳ ತನಿಖೆಯನ್ನು ಸ್ಥಳೀಯ ಪೋಲೀಸರು ಕೈಗೊಂಡು ಫಿರ್ಯಾದಿಗಳಲ್ಲಿರುವ ವಿಷಯಗಳು ನಿಜವೆಂದು ಕಂಡು ಬಂದರೆ, ಅಂಥ ಮೊಕದ್ದಮೆಗಳಲ್ಲಿ ಆರೋಪಿಗಳನ್ನು ಬಂಧಿಸಿ ತನಿಖೆ ಪೂರ್ಣಗೊಂಡಾದ ಮೇಲೆ ಚಾರ್ಜ್‌ಶೀಟ್‌ಗಳನ್ನು ಸಂಬಂಧಪಟ್ಟ ನ್ಯಾಯಾಲಯಕ್ಕೆ ಕಳುಹಿಸಿರುವರು. ಸದರಿ ನ್ಯಾಯಾಲಯಗಳಲ್ಲಿ ವಿಚಾರಣೆ ನಡೆಸಿ ಆಪಾದಿತರನ್ನು ಶಿಕ್ಷೆಗೆ ಗುರಿಪಡಿಸಲಾಗುವುದು.

ಇ) ದಲಿತರಿಗೆ ಎಲ್ಲಾ ವಿಧವಾದ ರಕ್ಷಣೆಗಳನ್ನು ಒದಗಿಸುವ ಜವಾಬ್ದಾರಿಯನ್ನು ಸರ್ಕಾರವು ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪೋಲೀಸ್ ಅಧಿಕಾರಿಗಳಿಗೆ ವಹಿಸಲಾಗಿದೆ.

೨) ಇತ್ತೀಚೆಗೆ ನಡೆಯಿತೆನ್ನಲಾದ ದೌರ್ಜನ್ಯಕ್ಷ ಪ್ರಕರಣಗಳಿಗೆ ಸಂಬಂಧಿಸಿದಂತಹ ಸ್ಥಳಗಳಿಗೆ, ಸ್ಥಳೀಯ ಪೋಲೀಸ್ ಅಧಿಕಾರಿಗಳು ಭೇಟಿ ಕೊಟ್ಟು, ಹಳ್ಳಿಯ ಮುಖಂಡರುಗಳ ಸಹಕಾರದೊಂದಿಗೆ ಶಾಂತಿ ಸಮಿತಿ ಸಭೆಗಳನ್ನು ಏರ್ಪಡಿಸುವುದರ ಜೊತೆಗೆ ಆಗಬಹುದಾದ ತೊಂದರೆಗಳನ್ನು ನಿವಾರಿಸಲು ಮಾಹಿತಿಯನ್ನು ಸಂಗ್ರಹಿಸಿ ಮುಂಜಾಗ್ರತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸೂಚನೆಗಳನ್ನು ನೀಡಲಾಗಿದೆ. ಅಲ್ಲದೆ ಹಿರಿಯ ಪೋಲೀಸ್ ಅಧಿಕಾರಿಗಳು ಅಂದರೆ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್ ಮತ್ತು ವಲಯದ ಡೆಪ್ಯುಟಿ ಪೋಲೀಸ್ ಇನ್ಸ್‌ಪೆಕ್ಟರ್‌ಜನರಲ್‌ರವರುಗಳು ಇಂತಹ ಹರಿಜನ ಕೇರಿಗಳಿಗೆ ಭೇಟಿ ಕೊಟ್ಟು ತಾವು ಕೈಗೊಂಡ ಪ್ರಯಾಸದ ಬಗ್ಗೆ ಮಾಸಿಕ ಡೈರಿಯಲ್ಲಿ ನಮೂದಿಸುವಂತೆಯೂ ಸಹ ಕಡ್ಡಾಯಗೊಳಿಸಲಾಗಿದೆ. ಹಾಗೂ ಅಂತಹ ಭೇಟಿಯ ವೇಳೆಯಲ್ಲಿ ಸವರ್ಣೀಯರಿಗೆ ಹರಿಜನ-ಗಿರಿಜನರಿಗೆ ಇರುವಂತಹ ಸಂವಿಧಾನಾತ್ಮಕ ಹಕ್ಕುಗಳ ಬಗ್ಗೆ ಹಾಗೂ ಈ ಸಂವಿಧಾನಾತ್ಮಕ ಹಕ್ಕುಗಳನ್ನು ಉಲ್ಲಂಘಿಸುವುದರ ವಿರುದ್ಧ ವಿಧಿಸುವ ಶಿಕ್ಷೆಯ ಬಗ್ಗೆ ಎಚ್ಚರಿಕೆಯನ್ನು ಕೊಟ್ಟು ಹರಿಜನ-ಗಿರಿಜನರಿಗೆ ಉತ್ತೇಜನ ನೀಡಿ ಜಾತೀಯತೆಯ ವೈಮನಸ್ಯವನ್ನು ತೊಡೆದು ಹಾಕುವುದು.

೩) ಹರಿಜನ-ಗಿರಿಜನರ ಮೇಲೆ ದೌರ್ಜನ್ಯ ನಡೆದ ಗ್ರಾಮಗಳಲ್ಲಿ ನಾಗರೀಕ ಹಕ್ಕು ಜಾರಿ ವಿಭಾಗದ ಅಧಿಕಾರಿಗಳು ಭೇಟಿ ನೀಡಿ ಅಲ್ಲಿನ ಪರಿಸ್ಥಿತಿಯ ಬಗ್ಗೆ ನಿಗಾ ವಹಿಸುವುದು.

೪) ನಾಗರೀಕ ಹಕ್ಕು ಜಾರಿ ವಿಭಾಗ ಹರಿಜನ-ಗಿರಿಜನರ ಮೇಲೆ ನಡೆಯುವ ಎಲ್ಲಾ ರೀತಿಯ ಮೊಕದ್ದಮೆಗಳ ವಿಚಾರಣೆಯ ಮೇಲ್ವಿಚಾರಣೆ ನಡೆಸುವುದು.

೫) ಮೇಲ್ಕಂಡ ಘಟನೆಗಳಲ್ಲಿ ಹರಿಜನ-ಗಿರಿಜನರಿಗೆ ದೈಹಿಕವಾಗಿ ತೊಂದರೆಯಾದಲ್ಲಿ ಅಥವಾ ಇನ್ನಿತರ ದಿನಬಳಕೆ ವಸ್ತುಗಳು ನಾಶವಾದಾಗ, ಸಂಬಂಧಪಟ್ಟ ಜಿಲ್ಲಾ ಪೋಲೀಸ್ ಅಧೀಕ್ಷಕರ ಶಿಫಾರಸ್ಸಿನ ಮೇಲೆ ಜಿಲ್ಲಾಧಿಕಾರಿಗಳು ಪರಿಹಾರ ಧನವನ್ನು ನೀಡಲಾಗುತ್ತದೆ.

ಅನುಬಂಧ-1

೧-೩-೮೬ ರಿಂದ ೧೦-೨-೮೯ರವರೆಗೆ **ಹರಿಜನರ** ಮೇಲೆ ನಡೆದ ದೌರ್ಜನ್ಯದ ಪ್ರಕರಣಗಳನ್ನು ತೋರಿಸುವ ಜಿಲ್ಲಾವಾರು ತಖ್ತೆ:

ಕ್ರಮ ಸಂಖ್ಯೆ	ಜಿಲ್ಲೆಗಳು	೧-೩-೮೬ ರಿಂದ ೩೧-೧೨-೮೯	೧೯೮೭	೧೯೮೮	೧-೧-೧೯೮೯ ರಿಂದ ೧೦-೨-೧೯೮೯
೧.	ಬೆಂಗಳೂರು ನಗರ	೩೧	—	೩	೧೦
೨.	ಬೆಂಗಳೂರು ಜಿಲ್ಲೆ	೩೯	೪೯	೧೦	೫
೩.	ಬೆಳಗಾಂ	೨೪	೨೯	೮	೯
೪.	ಬಳ್ಳಾರಿ	೧೫	೨೯	೧೨	೭
೫.	ಬೀದರ್	೭	೫೬	೧೩	೫
೬.	ಬಿಜಾಪುರ	೯	೩೮	೫೯	೬
೭	ಚಿಕ್ಕಮಗಳೂರು	—	೬	೧	—
೮	ಚಿತ್ರದುರ್ಗ	೨೨	೪೦	೨೩	೨
೯	ದಕ್ಷಿಣ ಕನ್ನಡ	೫	೧೩	೧೨	೩
೧೦	ಧಾರವಾಡ	೧೭	೧೭	೭	೨
೧೧	ಗುಲ್ಬರ್ಗಾ	೨೦	೨೯	೩೪	೧೪
೧೨	ಹಾಸನ	೧೦	೩೪	೯	—
೧೩	ಕೊಡಗು	೩೩	೧೯	೨೪	೩
೧೪	ಕೋಲಾರ	೫೬	೩೧	೪೮	೧೫
೧೫	ಕೆ.ಜಿ.ಎಫ್.	೧೨	೮	೧೪	೧
೧೬	ಮಂಡ್ಯ	೧೦	೨೦	೨೦	೮
೧೭	ಮೈಸೂರು	೨೯	೩೪	೩೮	೬
೧೮	ರಾಯಚೂರು	೩೯	೩೩	೩೯	೫
೧೯	ಶಿವಮೊಗ್ಗ	೧೩	೨	೨೩	೧
೨೦	ತುಮಕೂರು	೩೦	೨೨	೪೪	೧
೨೧	ಉತ್ತರ ಕನ್ನಡ	೧	೧೨	—	೧
	ಒಟ್ಟು	೪೨೨	೫೨೧	೪೪೮	೧೦೪

ಕೃಷ್ಣಾ ನದಿಯ ನೀರಿನ ಬಳಕೆ

೪೬೭. **ಶ್ರೀ ಆರ್. ರಾಮಯ್ಯ** (ಹಿರಿಯೂರು).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ನದಿಯ ನೀರಿನ ಬಳಕೆಗೆ ನೇಮಿಸಿದ್ದ ಬಚಾವತ್ ಪರದಿಯ ವಿವರವೇನು ;

ಆ) ಗಾಜ್ಜಕ್ಕೆ ಇದರಿಂದ ಎಷ್ಟು ಟಿ.ಎಂ.ಸಿ. ನೀರು ಸೊರೆಯುತ್ತದೆ; ಈ ನೀರಿನ ಬಳಕೆಗಾಗಿ ಯಾವ ಯೋಜನೆಯನ್ನು ತಯಾರು ಮಾಡಲಾಗಿದೆ, ಅದರಲ್ಲಿ ಭದ್ರಾ ಮೇಲ್ದಂಡೆ ಯೋಜನೆ ಇದೆಯೆ, ಇದ್ದಲ್ಲಿ ವಿವರ ನೀಡುವುದು ?